# ನಾನು ತೊಗರಿ

ಮನೋಜ್ ರಾಜನ್
ಬೆಂಗಳೂರು.

ಭಾರತ ದೇಶದಲ್ಲಿನ ಪ್ರಮುಖ ದ್ವಿದಳ ಧಾನ್ಯಗಳ ಬೆಳೆಯಲ್ಲಿ ನಾನು ಅಗ್ರಸ್ಥಾನದಲ್ಲಿದ್ದೇನೆ. ಜಾಗತಿಕ ಹವಾಮಾನ ಬದಲಾವಣೆ ಎದುರಿಸುತ್ತಿರುವ ಪ್ರಸ್ತುತ ಪರಿಸ್ಥಿತಿಯಲ್ಲಿಯೂ ಆಹಾರ ಭದ್ರತೆಗೆ ನನ್ನ ಕೊಡುಗೆ ಪ್ರಮುಖವಾಗಿದೆ ಎಂಬುದು ಹೆಮ್ಮೆ ತಂದಿದೆ. ಜನ ಸಾಮಾನ್ಯರು ಸಂಪ್ರದಾಯಕವಾಗಿ ನನ್ನನ್ನು ತೊಗರಿ ಅಥವಾ ತೊಗರಿಬೇಳೆ ಎಂದು ಕರೆಯುತ್ತಾರೆ. ಇನ್ನೂ ಕೆಲವು ಭಾಗಗಳಲ್ಲಿ ಪಾರಿವಾಳ ಬಟಾಣಿ ಎಂದು ನನಗೆ ನಾಮಕರಣ ಮಾಡಿದ್ದಾರೆ. ಆದರೆ ನನ್ನ ವೈಜ್ಞಾನಿಕ ಹೆಸರು ಕಜಾನಸ್ ಕಜಾನ, ವಿಜ್ಞಾನ ಆಧಾರಿತವಾಗಿ ನಾನು ಫಾಬೇಶನ್ ಕುಟುಂಬಕ್ಕೆ ಸೇರಿದ್ದೇನೆ. ನಾನು ಆಹಾರ ಭದ್ರತೆಯ ಬೆಳೆಯಾಗಿ, ವಾಣಿಜ್ಯ ರಫ್ತಿನ ಬೆಳೆಯಾಗಿ ಮತ್ತು ಆದಾಯ ಉತ್ಪಾದಿಸುವ ಮಹತ್ವದಿಂದಾಗಿ ಪ್ರಖ್ಯಾತಿ ಹೊಂದಿದ್ದೇನೆ.

ನಿಮ್ಮ ಆಹಾರ ಪದ್ಧತಿಯ ಖಾದ್ಯಗಳಲ್ಲಿ ನನ್ನ ಬಳಕೆ ಪರಚಿತವಾಗಿದೆ. ನಾನು ತಮ್ಮ ಪ್ರತಿನಿತ್ಯದ ಆಹಾರ ಪದ್ಧತಿಯಲ್ಲಿ ವಿವಿಧ ರೀತಿಯ ರುಚಿಕರ ಖಾದ್ಯಗಳಲ್ಲಿ ಬಳಕೆಯಾಗಿ ನಿಮ್ಮ ಊಟದ ತಟ್ಟೆಯಲ್ಲಿ ಲಭ್ಯವಾಗಿ ಪ್ರತಿಯೊಂದು ಮನೆಯಲ್ಲಿ ಜನಪ್ರಿಯ ಭಕ್ಷವಾಗಿರುತ್ತೇನೆ. ಭಾರತ ದೇಶದಲ್ಲಿನ ರಾಜ್ಯಗಳಲ್ಲಿ ನನ್ನನ್ನು ವಿವಿಧ ರೀತಿಯಲ್ಲಿ ಸಂಭೋದಿಸುತ್ತಾರೆ. ಕನ್ನಡದಲ್ಲಿ ತೊಗರಿ ಅಥವಾ ತೊಗರಿಬೇಳೆ, ತಮಿಳು ಭಾಷೆಯಲ್ಲಿ ತುರವಂ ಪರುಪ್ಪು, ಹಿಂದಿಯಲ್ಲಿ ತೂರ್, ಬಂಗಾಳಿಯಲ್ಲಿ ದಾಲ್ ಎಂದು ಪ್ರಾಂತ್ಯವಾರುಗಳಲ್ಲಿ ನನ್ನ ಹೆಸರನ್ನು ಸಂಭೋದಿಸುವುದು ವಾಡಿಕೆಯಾಗಿದೆ.

ನಾನು ಕೃಷಿ ಮೌಲ್ಯದ ಕಡಿಮೆ ಫಲವಾತದ ಭೂಮಿಯ ವ್ಯಾಪ್ತಿಯಾದ ಅರೆ ಶುಷ್ಕ ವಾತಾವರಣದಲ್ಲಿನ ಏಷ್ಯಾ ಮತ್ತು ಆಫ್ರಿಕಾ ದೇಶಗಳಲ್ಲಿ ಬೆಳೆಯುತ್ತೇನೆ. ಆದರೆ ಸಾಕಷ್ಟು ಮಂದಿಗೆ ಕೆಲವೊಂದು ಸತ್ಯಗಳ ಬಗ್ಗೆ ತಿಳುವಳಿಕೆ ಇಲ್ಲವಾಗಿದೆ. ಅಮೇರಿಕ ದೇಶದ ಅರೆ ಶುಷ್ಕ ಪ್ರದೇಶದಲ್ಲಿ ವಾರ್ಷಿಕ 1.1 ಬಿಲಿಯನ್ ನನ್ನ ನಷ್ಟ ಸಂಭವಿಸುತ್ತದೆ. ಇದಕ್ಕೆ ಪ್ರಮುಖ ಕಾರಣ ಕೆಲವೊಮ್ಮೆ ಕೀಟ ಮತ್ತು ರೋಗ ತೊಂದರೆಯಿಂದ ನನ್ನ ಪ್ರಮುಖ ಪೌಷ್ಟಿಕಾಂಶಗಳು ಅಥವಾ ಆರೋಗ್ಯ ವಿಫಲತೆ ಉಂಟಾಗುತ್ತದೆ. ಈ ಸಮಯದಲ್ಲಿ ನಾನು ಫ್ಯಸಾರಿಯಮ್ ಮತ್ತು ಸ್ಟೆರಿಲಿಟಿ ಮೊಸಾಯಿಕ್ ರೋಗಗಳಿಗೆ ತುತ್ತಾಗಿ ಬಳಲುತ್ತೇನೆ ಜೊತೆಗೆ ಹೆಲಿಕಾವರ್ಪ, ಮುರುಕಾ ಮತ್ತು ಪಾಡ್ ಫ್ಲೈ ಕೀಟಗಳು ಕೂಡ ಸಾಕಷ್ಟು ತೊಂದರೆಯನ್ನು ಕೊಡುತ್ತವೆ.

ನಾನು 1000 ಕ್ರಿ.ಪೂ. ಮೂಲದ ಸರಣಿ, ಬಳಿಕ ಇತಿಹಾಸ ಪೂರ್ವ ಅವಧಿಯಲ್ಲಿನ ಶಿಲಾಯುಗದಿಂದ ದೀರ್ಘ ಕಾಲಿಕ ಪುರತತ್ವ ಸಂಶೋಧನೆಗಳಿಂದ ದಕ್ಷಿಣ ಭಾರತದಲ್ಲಿ ಕಾಲಕ್ರಮೇಣ ಗುರುತಿಸಲ್ಪಟ್ಟಿದ್ದೇನೆ. ಆಫ್ರಿಕಾ ದೇಶದಲ್ಲಿ ನನ್ನ ದಾರಿಯನ್ನು ಗುರುತಿಸಲ್ಪಟ್ಟು ನನಗೆ ಕಾಗೋಫಿ (ಕಾಗೋ ಬಟಾಣಿ) ಎಂದು ಹೊಸ ಹೆಸರಿನಿಂದ ಕರೆಯಲಾಯಿತು. ನಂತರ ಅಮೇರಿಕ ಸಂಯುಕ್ತ ಸಂಸ್ಥಾನದಲ್ಲಿ ಸ್ಥಳೀಯ ಅಮೇರಿಕನ್ನರ ನಡುವೆ ಗುಲಾಮಗಿರಿ ಜೀತ ಪದ್ಧತಿ ಪ್ರಗತಿ ಅವಧಿಯಲ್ಲಿ ಅಲ್ಲಿಗೆ ತೆರಳಿದೆ.

ನಾನು ದೀರ್ಘಕಾಲಿಕ ಸಸ್ಯ ಎಂಬುದು ಜನ ಸಾಮಾನ್ಯರಿಗೆ ತಿಳಿಯದ ಸಾಧ್ಯತೆಯಿದೆ. ನಾನು ಪ್ರಮುಖ ದ್ವಿದಳ ಧಾನ್ಯ ಬೆಳೆಯಾಗಿ ಮಳೆ ನೀರು ಅವಲಂಬಿತ ಅರೆಶುಷ್ಕ ವಾತಾವರಣದ ಉಷ್ಣವಲಯದಲ್ಲಿ ಬೆಳೆಯುತ್ತೇನೆ. ವಿಶ್ವದ ಭಾರತೀಯ ಉಪಖಂಡ, ಪೂರ್ವ ಆಫ್ರಿಕಾ ಮತ್ತು ಮಧ್ಯ ಅಮೇರಿಕಾದ ಭೌಗೋಳಿಕ ವಲಯಗಳಲ್ಲಿ ಸಾಗುವಳಿಯಾಗುತ್ತೇನೆ.

ಭಾರತದಲ್ಲಿ ಮುಂಗಾರು ಹಂಗಾಮಿನಲ್ಲಿ ನನ್ನ ಬಿತ್ತನೆ ಕಾರ್ಯ, ಅದು ಜೂನ್ ಮತ್ತು ಜುಲೈ ಮಾಸಗಳಲ್ಲಿ ನನ್ನ ಕೃಷಿ ಬಿತ್ತನೆ ಕಾರ್ಯ ವಿಶೇಷವಾಗಿ ನಡೆಯುತ್ತದೆ. ಉಷ್ಣವಲಯದ ಹವಾಮಾನ ನನಗೆ ಅತ್ಯಂತ ಅನುಕೂಲಕರವಾಗಿರುತ್ತದೆ. ನಾನು ಬರ ಸಹಿಷ್ಣುತೆ ಬೆಳೆಯಾಗಿ ಮಣ್ಣಿನಲ್ಲಿ ಮೊನಚಾದ ಬೇರುಗಳನ್ನು ಹೊಂದಲು ಆರ್ಶಿವಾದಿತನಾಗಿದ್ದೇನೆ.

ನಾನು ಗ್ರೀಸ್ ದೇಶದ ಭೂಪ್ರದೇಶಕ್ಕಿಂತ ಕಡಿಮೆಯಿಲ್ಲದಷ್ಟು ಅಂದರೆ 46 ಲಕ್ಷ ಹೆಕ್ಟೇರ್ ಭೂಪ್ರದೇಶದಲ್ಲಿ ನನ್ನ ಉತ್ಪಾದನೆ ಮಾಡಲಾಗುತ್ತದೆ. ನನ್ನ ಉತ್ಪಾದನೆ ವಿಶ್ವದಲ್ಲಿ ಸರಿಸುಮಾರು 4.98 ಮಿಲಿಯನ್ ಟನ್‌ಗಳಷ್ಟು ಎಂದು ಅಂದಾಜಿಸಲಾಗಿದೆ. ಈ ಪೈಕಿ ಸುಮಾರು ಶೇಕಡ 80 ನನ್ನ ಉತ್ಪಾದನೆ ಭಾರತದಲ್ಲಿರುವುದನ್ನು ಅಂದಾಜು ಮಾಡಲಾಗಿದೆ. ಅಂದರೆ 1.05 ಮಿಲಿಯನ್ ಟನ್ ಉತ್ಪಾದನೆಯ ಮಟ್ಟವಾಗಿದೆ.

ಆಫ್ರಿಕಾ ದೇಶ ನನ್ನ ಉತ್ಪಾದನೆಯ ದ್ವಿತೀಯ ಕೇಂದ್ರ. ವಿಶ್ವದ ಒಟ್ಟಾರೇ ಉತ್ಪಾದನೆಯ ಪೈಕಿ ಶೇಕಡ 21 ರಷ್ಟು ನನ್ನ ಕೊಡುಗೆ ಈ ದೇಶದಿಂದಲೇ ಲಭ್ಯವಾಗುತ್ತದೆ. ವಿಶ್ವದ 25ರಷ್ಟು ಉಷ್ಣವಲಯ ಮತ್ತು ಉಪ ಉಷ್ಣವಲಯದಲ್ಲಿ ನಾನು ಏಕ ಬೆಳೆಯಾಗಿ ಮತ್ತು ಇಂಟರ್ ಮಿಕ್ಸ್ ಬೆಳೆಯಾಗಿ ಬೆಳೆಯುತ್ತೇನೆ. ಉದಾಹರಣೆಗೆ ಹುಲ್ಲು ಜೋಳ (ದೊಡ್ಡ ರಾಗಿ), ಬಾಜ್ರ ಅಥವಾ ಮೆಕ್ಕೆ ಜೋಳ (ಜಿಯಾಮೇಜ್) ಅಥವಾ ಇತರೆ ದ್ವಿದಳ ಧಾನ್ಯಗಳಾದ ಕಡಲೆಕಾಯಿ ಬೆಳೆಗಳ ಜೊತೆಯಲ್ಲಿ ನನ್ನನ್ನು ಬೆಳೆಯಲಾಗುತ್ತದೆ. ವಿಶೇಷವಾಗಿ ನನ್ನ ಬಳಿ ಸಹಜೀವನದ ಸಾಮರ್ಥ್ಯವಿದ್ದು ಪರಸ್ಪರ ಸಂಪರ್ಕದ ಜೊತೆಯಾಗಿ ರೈಜೋಬಿಯಾ ಬ್ಯಾಕ್ಟೀರಿಯಾ ಉತ್ಕೃಷ್ಟಗೊಳಿಸಲು ಸಹಜೀವನದ ಸಾರಜನಕ ಸ್ಥಿರೀಕರಣದ ಮೂಲಕ ಮಣ್ಣಿನಲ್ಲಿ ಬೇರುಗಳನ್ನು ಸೇರುತ್ತೇನೆ. ಆದ್ದರಿಂದ ಬೆಲೆಬಾಳುವ ಸಾವಯವ ಮತ್ತು ಸೂಕ್ಷ್ಮ ಪೋಷಕಾಂಶಗಳು ಮಣ್ಣಿನಲ್ಲಿ ಲಭ್ಯವಾಗುತ್ತವೆ. ಒಂದು ಹೆಕ್ಟೇರ್‌ಗೆ 90 ಕೆಜಿ ಸಾರಜನಕವನ್ನು ನಾನು ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿದ್ದೇನೆ. ನಾನು ಮೇವು ಬೆಳೆಗಳ ಪಾತ್ರದ ವ್ಯಾಪ್ತಿಯನ್ನು ನಿರ್ವಹಿಸುತ್ತೇನೆ. ಸಾಮಾನ್ಯವಾಗಿ ಸುಗ್ಗಿ ಕಾಲದಲ್ಲಿ ನನ್ನ ಕೊಯ್ಲನ್ನು ರೈತರು ಕೈಯಿಂದಲೇ ಮಾಡುತ್ತಾರೆ. ತದನಂತರ ನನ್ನನ್ನು ಅಗತ್ಯಕ್ಕೆ ಅನುಗುಣವಾಗಿ ಸೂರ್ಯನ ಶಾಖದಲ್ಲಿ ಒಣಗಿಸುತ್ತಾರೆ. ಬಳಿಕ ಕಣದಲ್ಲಿ ತೂರಿ ಕರಷಿ ಧಾನ್ಯ ಹೊಟ್ಟು ಮತ್ತು ಕಡ್ಡಿಕಸವನ್ನು ಬೇರ್ಪಡಿಸುತ್ತಾರೆ.

ಭಾರತೀಯ ಮಾರುಕಟ್ಟೆಯಲ್ಲಿ ಸಾಮಾನ್ಯವಾಗಿ ನನ್ನ ಆಗಮನ ಅಕ್ಟೋಬರ್ ತಿಂಗಳಲ್ಲಿ ಆರಂಭವಾಗುತ್ತದೆ. ನನ್ನ ಹೊಸ ತಳಿ 4 ರಿಂದ 6 ತಿಂಗಳಲ್ಲಿ ಕೊಯ್ಲುಗೆ ಬರುವುದರಿಂದ ರೈತರಿಗೆ ವಾಣಿಜ್ಯ ಬೆಳೆಯಾಗಿ ಬೆಳೆಯಲು ಉಪಯುಕ್ತವಾಗಿದೆ. ನನ್ನ ಎರಡು ಹೈಬ್ರಿಡ್ ಮೂಲಕ ತಳಿಗಳಾದ **ICPH 2671** ಮತ್ತು **ICPH2740** ಬೀಜಗಳು ಸಾಮಾನ್ಯ ಕೃಷಿ ಪದ್ಧತಿಯಲ್ಲಿ ರೈತರಿಗಾಗಿ ಭಾರತದಲ್ಲಿ ಬಿಡುಗಡೆಯಾಗಿದೆ.

ಭಾರತ ದೇಶದ ರಾಜ್ಯಗಳಾದ ಮಹಾರಾಷ್ಟ್ರ, ಉತ್ತರಪ್ರದೇಶ, ಕರ್ನಾಟಕ, ಮಧ್ಯಪ್ರದೇಶ, ಗುಜರಾತ, ರಾಜಸ್ಥಾನ ಮತ್ತು ಆಂಧ್ರ ಪ್ರದೇಶಗಳಲ್ಲಿ ನನ್ನನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತಿದೆ. ದ್ವಿದಳ ಧಾನ್ಯಗಳ ಮೇಲೆ ನಮ್ಮ ದೇಶದ ಸಾಮಾನ್ಯ ಕುಟುಂಬಗಳು ಬಹು ಹಿಂದಿನಿಂದಲೂ ಅವಲಂಬಿತವಾಗಿವೆ. ಭಾರತ ನನ್ನ ಉತ್ಪಾದನೆ, ಬಳಕೆ ಮತ್ತು ಆಮದು ಕ್ಷೇತ್ರದಲ್ಲಿ ಮೊದಲನೇ ಸ್ಥಾನ ಪಡೆದಿದೆ. ನಾನು ಬಟಾಣಿ ಬಳಿಕ ಎರಡನೇ ಪ್ರಮುಖ ಬೆಳೆಯಾಗಿದ್ದೇನೆ. ವಿಶ್ವದ 25ಕ್ಕೂ ಹೆಚ್ಚು ದೇಶಗಳಲ್ಲಿ ನನ್ನನ್ನು ಬೆಳೆಯಲಾಗುತ್ತದೆ ಎಂದು ಹೇಳಲು ಹೆಮ್ಮೆಯಾಗುತ್ತದೆ.

ಭಾರತೀಯರ ಆಹಾರ ಪದ್ಧತಿಯಲ್ಲಿ ಅತೀ ಹೆಚ್ಚು ಬಳಕೆಯಾಗುತ್ತೇನೆ. ನನ್ನ ಬೇಡಿಕೆ ಹೆಚ್ಚಿರುವುದರಿಂದ ಮಯನ್ಮಾರ್, ತಂಜ್ಮೆನಿಯ ಗಣರಾಜ್ಯ, ಮಲಾವಿ, ಉಗಾಂಡ, ಮೊಝಾಂಬಿಕ್ ಸೇರಿದಂತೆ ಇತರೆ ರಾಷ್ಟ್ರಗಳಿಂದಲೂ ಭಾರತಕ್ಕೆ ಆಮದು ಮಾಡಿಕೊಳ್ಳುತ್ತಾರೆ. ಜೊತೆಗೆ ಯು.ಎ.ಇ., ಯುಎಸ್‌ಎ, ಸಿಂಗಾಪೂರ ಮತ್ತು ಸೌದಿ ಅರೇಬಿಯಾ ರಾಷ್ಟ್ರಗಳಿಗೆ ಭಾರತದಿಂದ ನಾನು ಸಣ್ಣ ಪ್ರಮಾಣದಲ್ಲಿ ರಫ್ತು ಮಾಡುತ್ತಾರೆ.

ಭಾರತದಲ್ಲಿ ಮುಂಗಾರು ಮತ್ತು ಹಿಂಗಾರು ಬೆಳೆಗಳು ನವೆಂಬರ್ ಮಾಸದಿಂದ ಮಾರುಕಟ್ಟೆಗೆ ಬರುವ ಆವಕವಾಗುವ ಸಮಯ. ನನ್ನ ಉತ್ಪಾದನೆ ಮುಂಗಾರು ಋತುವಿನಲ್ಲಿ ಮಾತ್ರ. ಈ ಕಾರಣದಿಂದಲೇ ದ್ವಿದಳ ಧಾನ್ಯಗಳ ಪೈಕಿ ನನ್ನ ಬೆಲೆ ಮಾತ್ರವೇ ಅತಿ ಹೆಚ್ಚಾಗಿ ಉಲ್ಬಣಿಸುತ್ತದೆ. ಮುಂಗಾರು ಹಂಗಾಮಿನಲ್ಲಿ ಒಟ್ಟಾರೆ ದ್ವಿದಳ ಧಾನ್ಯಗಳ ಉತ್ಪಾದನೆ ಶೇಕಡ 70 ರಷ್ಟು. ನನ್ನ ಬೇಡಿಕೆಯು ಹಬ್ಬದ ಋತುಮಾಸಗಳಲ್ಲಿ ಹೆಚ್ಚಾಗಿರುತ್ತದೆ. ಕೃಷ್ಣ ಜನ್ಮಾಷ್ಟಮಿಯಿಂದ ದೀಪಾವಳಿ (ಆಗಸ್ಟ್‌ನಿಂದ ನವೆಂಬರ್) ವರೆಗೆ ಹೆಚ್ಚು ಬೇಡಿಕೆ ಇದೆ. ಈ ಸಮಯದಲ್ಲಿ ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆಯನ್ನು ಗ್ರಾಹಕರು ಒಪ್ಪಲೇಬೇಕಾಗಿದೆ. ಆದ್ದರಿಂದ ವರ್ತಕರು ಇಂತಹ ಅವಕಾಶವನ್ನು ಬಳಸಿಕೊಳ್ಳುತ್ತಾರೆ.

ಈ ಸಮಯದ ನಡುವೆ ಮುಂಗಾರು ಬೆಳೆ ಬಗ್ಗೆ ಹುರುಳಿಲ್ಲದ ಮಾಹಿತಿ ಮತ್ತು ಧಾರಣೆಯಲ್ಲಿ ಏರಿಕೆಗಳು ಕೂಡ ಮಾರುಕಟ್ಟೆಯನ್ನು ಪ್ರವೇಶಿಸುತ್ತವೆ. ಇದರಿಂದ ನನ್ನ ಬೆಲೆ ಹೆಚ್ಚಾಗುತ್ತದೆ. ಇತರೆ ಕಾರಣಗಳು ಒಳಗೊಂಡಂತೆ ಅನಿರ್ದಿಷ್ಟವಾದ ಮುಂಗಾರು ವೈಫಲ್ಯ, ಗೌಪ್ಯ ಸಂಗ್ರಹಣೆ ಇದಕ್ಕೆ ಕಾರಣವಾಗಿದೆ.

ನಾನು ಭಾರತದಲ್ಲಿ ಪ್ರಮುಖವಾಗಿ ವ್ಯಾಪಾರ ವಾಗುವ ರಾಜ್ಯಗಳೆಂದರೆ ಇಂದೋರ್, ಭೂಪಾಲ್, ಒಡಿಶಾ, ಜಲಗಾಂವ್, ಲಾತೂರ್, ಮುಂಬೈ, ಅಕೋಲಾ ಇತ್ಯಾದಿ. ನಾನು ಕರ್ನಾಟಕದ ಪ್ರಮುಖ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ವ್ಯಾಪಾರವಾಗುತ್ತೇನೆ. ಕರ್ನಾಟಕದಲ್ಲಿ ರಾಷ್ಟ್ರೀಯ ಇ-ಮಾರ್ಕೆಟ್ ಸರ್ವೀಸಸ್‌ನ ಏಕೀಕೃತ ಮಾರುಕಟ್ಟೆ ವೇದಿಕೆಯ ಆನ್‌ಲೈನ್‌ನಲ್ಲಿ ನಾನು ವ್ಯಾಪಾರ ವಾಗುತ್ತೇನೆ. ರಾಷ್ಟ್ರೀಯ ಸರಕು ಮತ್ತು ಉತ್ಪನ್ನಗಳ ವಿನಿಮಯ ಲಿಮಿಟೆಡ್ ಮತ್ತು ರಾಷ್ಟ್ರೀಯ ಬಹು ಸರಕು ವಿನಿಮಯ ಇಂಡಿಯಾ ಲಿಮಿಟೆಡ್‌ನಲ್ಲಿ ಕೂಡ ನಾನು ವ್ಯಾಪಾರವಾಗುತ್ತೇನೆ.

ಹೆಚ್ಚಿನ ಬೆಲೆಯ ಏರುಪೇರಿನ ನಡುವೆ, ಏಕೀಕೃತ ಮಾರುಕಟ್ಟೆ ವೇದಿಕೆ ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಇದರಿಂದ ಸಾಮಾನ್ಯ ವರ್ಷಗಳಲ್ಲಿ ಕನಿಷ್ಟ ಬೆಲೆಯ ವಿಚಲಿತದಿಂದ ದೂರವಾಗಿದೆ.

ನಾನು ಕಲ್ಬುರ್ಗಿ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಅತೀ ಹೆಚ್ಚು ಕ್ವಿಂಟಾಲ್‌ಗಳು ಮತ್ತು ಲಾಟ್‌ವಾರು ವ್ಯಾಪಾರ ವಾಗುತ್ತೇನೆ. ★

**ರೈತ ಬಾಂಧವರೇ...**

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಂದ ನೀಡಲಾಗುತ್ತಿದ್ದ ರೈತ ಸಂಜೀವಿನಿ ಅಪಘಾತ ವಿಮಾ ಯೋಜನೆಯ ಪರಿಹಾರ ಮೊತ್ತವನ್ನು ₹.1 ಲಕ್ಷಕ್ಕೆ ಹೆಚ್ಚಿಸಲಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಸಮೀಪದ ಮಾರುಕಟ್ಟೆ ಸಮಿತಿ ಅಥವಾ ಮಂಡಳಿಯ ಕಛೇರಿಗಳನ್ನು ಸಂಪರ್ಕಿಸಲು ಕೋರಿದೆ.

## ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಕೃಷಿಪೇಟೆ

**ಚಂದಾ ದರಗಳು**

| | | |
|---|---|---|
| ಬಿಡಿ ಪತ್ರಿಕೆ | ರೂ. | 12-00 |
| ವಾರ್ಷಿಕ ಚಂದಾ | ರೂ. | 120-00 |
| ಆಜೀವ ಸದಸ್ಯತ್ವ | ರೂ. | 1,400-00 |
| ದಶವಾರ್ಷಿಕ ಸದಸ್ಯತ್ವ (ಸಂಘ-ಸಂಸ್ಥೆಗಳಿಗೆ) | ರೂ. | 1,500-00 |

ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಸಂಪರ್ಕಿಸಿರಿ :

**ವ್ಯವಸ್ಥಾಪಕ ಸಂಪಾದಕರು,**
**"ಕೃಷಿಪೇಟೆ ಮಾಸಪತ್ರಿಕೆ"**

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಶ್ರೀ ಆರ್.ಬಿ. ಮಾಮಲೆದೇಸಾಯಿ ಸ್ಮಾರಕ ಭವನ,
ಭೈರಿದೇವರಕೊಪ್ಪ, ಹುಬ್ಬಳ್ಳಿ-580 025.ದೂರವಾಣಿ : 2373726, 2375078
ಫ್ಯಾಕ್ಸ್ : 0836-2372751, email : ksamb@rediffmail.com